# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 10.06.2011**

## *ಪಾಲಿಕೆಯ ವಾರ್ಡ್-158ರ ಸಹಾಯ ಕೇಂದ್ರ ಸ್ಥಳಾಂತರ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ (ಗಾಳಿ ಆಂಜನೇಯ ದೇವಸ್ಥಾನ) ವಲಯದ ವಾರ್ಡ್ ನಂ.158ರ ಸಹಾಯ ಕೇಂದ್ರವು ಹಾಲಿ ಟಿಂಬರ್ ಯಾರ್ಡ್‌ನ ಟೆಲಿಕಾಂ ಲೇಔಟ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಸಹಾಯ ಕೇಂದ್ರವನ್ನು ಎಫ್.ಸಿ.ಐ. ಬಡಾವಣೆ, ಹನುಮಂತಪ್ಪ ಇಂಡಸ್ಟ್ರೀಯಲ್ ಬಡಾವಣೆ ಹಿಂಭಾಗ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಸದರಿ ಕಛೇರಿಯು ದಿನಾಂಕ: 13.06.2011 ರಿಂದ ಕಾರ್ಯನಿರ್ವಹಿಸಲಿದೆ ಎಂದು ಜಂಟಿ ಆಯುಕ್ತರು (ದಕ್ಷಿಣ) ವಲಯ ರವರು ತಿಳಿಸಿರುತ್ತಾರೆ. ಸಾರ್ವಜನಿಕರು ಇನ್ನುಮುಂದೆ ವಾರ್ಡ್-158ರ ತೆರಿಗೆಯನ್ನು ಮೇಲ್ಕಂಡ ವಿಳಾಸದ ಸಹಾಯ ಕೇಂದ್ರದಲ್ಲಿ ಪಾವತಿಸಬಹುದಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 10.06.2011**

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು WP ಸಂಖ್ಯೆ: 31394/2009, ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬೃಹತ್ ನೀರುಗಾಲುವೆಯ ಒತ್ತುವರಿಯನ್ನು ಶೀಘ್ರದಲ್ಲಿ ಮತ್ತು ಕಟ್ಟುನಿಟ್ಟಾಗಿ ತೆರವುಗೊಳಿಸಬೇಕೆಂದು ಆದೇಶಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಮುಖ್ಯ ಅಭಿಯಂತರರು, ಬೃಹತ್ ನೀರುಗಾಲುವೆಯ ವಿಭಾಗದ ವತಿಯಿಂದ ಕೆಳಕಂಡ 2 ಜಾಗಗಳಲ್ಲಿ ದಿನಾಂಕ: 10.06.2011 ರಂದು ತೆರವುಗೊಳಿಸಲಾಗಿರುತ್ತದೆ ಎಂದು ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ವಲಯ ರವರು ತಿಳಿಸಿದ್ದಾರೆ.

1. ವಾರ್ಡ್ ಸಂಖ್ಯೆ: 106, ರಾಜಕುಮಾರ್ ವಾರ್ಡ್‌ನಲ್ಲಿ ಮಳೆ ನೀರುಗಾಲುವೆಯ 60 ಅಡಿ ಉದ್ದ ಒತ್ತುವರಿ ಮಾಡಿಕೊಂಡು ನಿರ್ಮಿಸಲಾಗಿದ್ದ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಲಾಗಿರುತ್ತದೆ.
2. ವಾರ್ಡ್ ನಂ. 57, ಸಿ.ವಿ. ರಾಮನ್‌ನಗರ, ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ ಮೋರಿಯ ಮೇಲೆ ನಿರ್ಮಿಸಲಾದ ಕಾವಲುಗಾರನ ಕೊಠಡಿ ಮತ್ತು ಶೌಚಾಲಯವನ್ನು ತೆರವು ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**